ಶ್ರೀ ಜಿ. ಪುಟ್ಟಸ್ವಾಮಿಗೌಡ.—ಹಾಗೇನೂ ಬಂದಿಲ್ಲ. ೧೯೮೮ರಲ್ಲಿ ಅವರು ೩೦ ಎಕರೆ ಭೂಮಿ ಬೇಕೆಂದು ಕೇಳಿದಮೇಲೆ, ೧೮ ಎಕರೆ ೨೯ ಗುಂಟೆ ಪ್ರದೇಶವನ್ನು ನಾವು ಅಕ್ವೈರ್ ಮಾಡುವುದಕ್ಕೆ ಕಲಂ ೬ (೧) ಪ್ರಕಾರ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಉಳಿದ ಭೂಮಿಗೆ ನೋಟಿಫಿಕೇಷನ್ ಹೊರಡಿಸುವ ಹಂತದಲ್ಲಿದ್ದೇವೆ. ಅವರು ಕೇಳಿದಷ್ಟು ಜಮೀನನ್ನು ಕೊಡಲು ನಾವು ಬದ್ಧರಿದ್ದೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಇದು ಇನ್ನು ಒಂದು ಅಥವಾ ಎರಡು ತಿಂಗಳೊಳಗೆ ಮುಗಿಯಬಹುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಅಲ್ಲಿ ಒಂದು ಕೊರತೆ ಇದೆ. ಅವರು ಕೇಳಿದಷ್ಟು ಜಮೀನನ್ನು ಅವರು ಕೇಳಿದ ಜಾಗದಲ್ಲಿ ಕೊಡುವುದು ಸ್ವಲ್ಪ ಕಷ್ಟವಾಗಿದೆ ಎಂದು ನನಗೆ ಬಂದಿರತಕ್ಕ ವರದಿ ಪ್ರಕಾರ ಗೊತ್ತಾಗಿದೆ. ಆದಕ್ಕಾಗಿ ಇನ್ನೂ ೧೨ ಎಕರೆ ಜಮೀನನ್ನು ನಾವು ಅಕ್ವೈರ್ ಮಾಡಿದರೆ, ಅವರು ಕೇಳಿದಷ್ಟು ಭೂಮಿಯನ್ನು ಕೊಟ್ಟಹಾಗೆ ಆಗುತ್ತದೆ. ಈ ಬಗ್ಗೆ ತ್ವರಿತಗತಿಯಲ್ಲಿ ನೋಟಿಫಿಕೇಷನ್ ಮಾಡುವುದಕ್ಕೆ ನಾವು ಸೂಚನೆಯನ್ನು ಕೊಟ್ಟಿದ್ದೇವೆ.

ಅರಕ್ಷಕ ವಸತಿ ಗೃಹಗಳ ನಿರ್ವಹಣೆ ಬಗ್ಗೆ

೪೪೧ (೧೩೭೭) ಶ್ರೀ ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಶಿವಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಪೊಲೀಸ್ ಸಿಬ್ಬಂದಿಗೆ ಸಿ. ಓ. ಡಿ, ಸೇರಿ ಇರುವ ವಾಸದ ಮನೆಗಳ ಸಂಖ್ಯೆ ಎಷ್ಟು ?

(ಆ) ಸದರೀ ಕಟ್ಟಡ ಮತ್ತು ಕ್ಯಾಂಪಸ್‌ನ ರಿಪೇರಿ ಮತ್ತು ವಾರ್ಷಿಕ ದುರಸ್ತಿಗೆ ಯಾರು ಜವಾಬ್ದಾರರು ;

(ಇ) ರಿಪೇರಿ, ವಾರ್ಷಿಕ ದುರಸ್ತಿ ಮತ್ತು ಸದಾಕಾಲ ಕುಡಿಯುವ ನೀರಿನ ವ್ಯವಸ್ಥೆ, ದೀಪ, ನೈರ್ಮಲ್ಯೀಕರಣ ವ್ಯವಸ್ಥೆ, ಸಾಂಸ್ಕೃತಿಕ ಹಾಗೂ ಕ್ರೀಡಾ ವ್ಯವಸ್ಥೆ ಇವುಗಳ ತಪಾಸಣೆ ಅವಧಿ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಒಟ್ಟು ೩೦೫ ವಸತಿ ಗೃಹಗಳು.

(ಆ) ಲೋಕೋಪಯೋಗಿ ಇಲಾಖೆಯ ಬೆಂಗಳೂರಿನ ೧ನೇ ಕಟ್ಟಡಗಳ ವಿಭಾಗದ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುವರು.

(ಇ) ಸಾಮಾನ್ಯವಾಗಿ ವಾರಕ್ಕೊಂದು ಬಾರಿ ತಪಾಸಣೆ ಮಾಡಲಾಗುತ್ತಿದೆ.

೧. ವಸತಿ ಗೃಹಗಳಿಗೆ ಬೆಂಗಳೂರಿನ ಜಲಮಂಡಲಿ ಮೂಲಕ ನೀರು ಒದಗಿಸಲಾಗುತ್ತಿದೆ.

೨. ವಿದ್ಯುತ್ ಸರಬರಾಜನ್ನು ಕರ್ನಾಟಕ ವಿದ್ಯುತ್ ಮಂಡಲಿಯು ಮತಿಯಿಂದ ಮಾಡಲಾಗುತ್ತಿದೆ.

೩. ಒಳಾವರಣದ ಒಳಚರಂಡಿ ವ್ಯವಸ್ಥೆಯು ಸಾಮಾನ್ಯ ನಿರ್ವಹಣೆ ಲೋಕೋಪಯೋಗಿ ಇಲಾಖೆಯಿಂದ ಮಾಡಲಾಗುತ್ತಿದೆ.

೪. ಕ್ರೀಡಾ ಮತ್ತು ಸಾಂಸ್ಕೃತಿಕ ವ್ಯವಸ್ಥೆ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ ಆದರೆ ಇದರಲ್ಲಿ Normally Quarters are being inspected by the concerned Engineers once in a week,' ಎಂದು ಹೇಳುತ್ತಾರೆ. ನಾನು ಆ ಕ್ಷೇತ್ರವಲ್ಲಿ ಚುನಾಯಿತನಾಗಿ ೬ ತಿಂಗಳಾಯಿತು. ಆರು ತಿಂಗಳಿಂದ ಯಾರೂ ಹೋಗಿಲ್ಲ. ಏನೂ ಮಾಡಿಲ್ಲ. ಪ್ರತಿದಿನ ಆ ವಸತಿ ಗೃಹದ ಜನರು ಬಹಳ ಬೇಜಾರು ಮಾಡಿಕೊಳ್ಳುತ್ತಿದ್ದಾರೆ. ಅಲ್ಲಿಗೆ ನಾನೂ ಹೋಗುವುದಕ್ಕೆ ಆಗುತ್ತಾ ಇಲ್ಲ. ಈ ತರಹ ಉತ್ತರಗಳು ಬರುತ್ತಾ ಇದ್ದರೆ, ನನ್ನ ಭಾವನೆಯಲ್ಲಿ ನಾಗರೀಕರಿಗೆ ಮೋಸ ಮಾಡಿದ ಹಾಗೆ ಹಾಗೂ ಈ ಸಭೆಗೂ ಮೋಸ ಮಾಡಿದ ಹಾಗೆ ಆಗುತ್ತದೆ. ಯಾವ ಕೆಲಸ ಆಗಬೇಕೋ ಅದು ಆಗುವುದಿಲ್ಲ. ಇಲ್ಲಿ ಉತ್ತರ ಕೊಡಬೇಕಾದರೆ, ನಿಜವಾಗಿಯೂ ಪರಿಶೀಲನೆ

ಹೋಡಿದ್ದಾರೆಯೇ, ಸಂಬಂಧಪಟ್ಟ ಅಧಿಕಾರಿಗಳು ತನಿಖೆ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತೀವ್ರವಾಗಿ ತಿಳಿದುಕೊಳ್ಳಬೇಕೆಂಬುದು ನನ್ನ ಭಾವನೆ, ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಸ್ಥಳ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆ ಇಂತಹ ಜವಾಬು ಕೊಡಬೇಕು. ಅಲ್ಲಿ ವಾರ್ಷಿಕ ರಿಪೇರಿ ಸರಿಯಾಗಿ ಆಗುವುದಿಲ್ಲ, ಆ ಕ್ವಾರ್ಟರ್ಸ್ ಒಳಗಿನ ರಸ್ತೆಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ನೀರಿನ ಪೈಪುಗಳ ತುಕ್ಕು ಹಿಡಿದಿವೆ. ನೀರಿಗೆ ಕಷ್ಟ, ನೀರು ಹರಿಯುವುದೇ ಇಲ್ಲ. ಬೀದಿ ದೀಪಗಳು ಸರಿಯಾಗಿ ಇಲ್ಲ. ಆ ಸುತ್ತ ಮುತ್ತಲಿನ ಅನ್ ಸೋಷಿಯಲ್ ಕ್ಯಾರೆಕ್ಟರ್ಸ್ ಅಲ್ಲಿಯ ಜನಕ್ಕೆ ತೊಂದರೆ ಕೊಡತಕ್ಕ ಪರಿಸ್ಥಿತಿಯಲ್ಲಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಇದು ಅಧಿಕಾರಿಗಳ ಕೆಲಸದ ನಿರ್ವಹಣೆಯಿಂದ ತೊಂದರೆಯಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಅಲ್ಲಿ ಕೊಡತಕ್ಕ ಮೈಂಟಿನೆನ್ಸ್ ಗ್ರಾಂಟ್ ಬಹಳ ಕಡಿಮೆ ೩೦೫ ವಸತಿ ಗೃಹಗಳಿಗೆ, ಸರ್ಕಾರ ರಿಪೇರಿಗಾಗಿ ಕೊಡುವುದು ೧ ಲಕ್ಷ ೭೫ ಸಾವಿರ ಬಹುಶಃ ಇದು ಏತಕ್ಕೂ ಸಾಲದು ಎನ್ನುವುದನ್ನು ತಮ್ಮ ಮೂಲಕ ತಿಳಿಯಬಯಸುತ್ತೇನೆ. ಸರ್ಕಾರದವರು ಮೈಂಟಿನೆನ್ಸ್‌ಗೆ ಕಟ್ಟಡದ ಮೆಚ್ಚಜದಲ್ಲಿ ಶೇಕಡ ೩ರಷ್ಟು ಮಾತ್ರ ರಿಪೇರಿಗೆ ಕೊಡತಕ್ಕ ಹಣ. ಇವತ್ತಿನ ದಿವಸ ಏನೇನೂ ಸಾಕಾಗುತ್ತಾ ಇಲ್ಲ ಎನ್ನುವುದನ್ನು ವಿವರಿಸಿದ್ದೇನೆ. ಈಗಾಗಲೇ ಪ್ಲಿಂಥ್ ಏರಿಯಾದಲ್ಲಿ ಕೊಡಬೇಕೆಂದು ಆರ್ಥಿಕ ಇಲಾಖೆಗೆ ನಮ್ಮ ಇಲಾಖೆಯಿಂದ ಪ್ರಪೋಸ್ ಮಾಡಿದ್ದೇವೆ. ಅಲ್ಲಿಂದ ಹೆಚ್ಚು ಹಣ ಬಂದರೆ, ಈ ವಸತಿಗೃಹಗಳ ರಿಪೇರಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತು ಹಣ ಕೊಡದೇ ಅಧಿಕಾರಿಗಳು ಹೋಗಿ ಬರುವುದರಿಂದ, ಕೆಲಸ ಆಗುತ್ತಿಲ್ಲವೆಂದು ಹೇಳುವುದು ಸರಿಯಾದುದಲ್ಲ. ಅಧಿಕಾರಿಗಳು ಹೋಗಿ ನೋಡಿದಾಗ, ಅಲ್ಲಿ ಖರ್ಚು ಮಾಡುವುದಕ್ಕೆ ಹಣ ಬೇಕು ಎಂಬ ಕಾರಣದಿಂದ ಹಾಗೂ ಅವರು ಹೇಳಿದ ವೈಯಕ್ತಿಕ ಅನಿಸಿಕೆಗಳೇನಿವೆ ಅವು ಸರಿ ಎಂದು ಹೇಳುತ್ತಾ, ವಿತ್ತ ಇಲಾಖೆಯಿಂದ ನಮ್ಮ ಬೇಡಿಕೆಗೆ ಮಂಜೂರಾತಿ ಸಿಕ್ಕಿದ ತಕ್ಷಣ, ಅವರು ನಿರೀಕ್ಷಿಸಿದ ಮಟ್ಟದಲ್ಲಿ ರಿಪೇರಿ ಮಾಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎ.ಕೆ. ಆನಂತಕೃಷ್ಣ.— ಹಣ ಇಲ್ಲದ ಕಾರಣ ಏನೂ ಮಾಡುವುದಕ್ಕಾಗುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ಒಂದು ರೀತಿಯಲ್ಲಿ ಒಪ್ಪಿಕೊಳ್ಳಬೇಕು. ಆದರೆ ಇಲ್ಲಿ ಉತ್ತರ ಕೊಟ್ಟಿರುವುದು,

"C) Normally Quarters are being inspected by the concerned Engineers once in a week.

1) Drinking water is being supplied through the sources BWS & SB according to their scheduled time.

1) Electricity is being supplied through the source of K.E.B."

ಎಂದು ಹೇಳುತ್ತಾರೆ. ಇದನ್ನು ಕೊಡುತ್ತಿದ್ದೇವೆ, ಇದು ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಉತ್ತರ ಬೇರೆ ರೀತಿಯಲ್ಲಿ ಬರುತ್ತಿದೆ. ಅಲ್ಲಿ ಪ್ರಾಪರ್ ಎಲೆಕ್ಟ್ರಿಸಿಟಿ ಸಪ್ಲೈ ಇಲ್ಲ, ಸ್ಟ್ರೀಟ್ ಲೈಟಿಂಗ್ ಸರಿಯಾಗಿಲ್ಲ, ಕುಡಿಯುವ ನೀರಿನ ಸಪ್ಲೈ ಸರಿಯಾಗಿಲ್ಲ, ಬಿಲ್ಡಿಂಗ್ ಎಲ್ಲಾ ಸೋರುತ್ತಿದೆ. ಜನಗಳಿಗೆ ಬಹಳ ಕಷ್ಟವಾಗುತ್ತಿದೆ. ಅಂಡರ್‌ಗ್ರೌಂಡ್ ಡ್ರೈನೇಜ್ ಸಹ ಓವರ್ ಫ್ಲೋ ಆಗುತ್ತದೆ. ಪ್ರಾಪರ್ ಮೇಂಟಿನೆನ್ಸ್ ಇಲ್ಲ. ಇದಕ್ಕಾಗಿ ಈಗ ಕಡಿಮೆ ಹಣ ಖರ್ಚು ಮಾಡುತ್ತಿರಬಹುದು, ಆದರೆ ಖರ್ಚು ಮಾಡದೇ ಇರತಕ್ಕಂಥ, ಇರುವ ಎಂಪ್ಲಾಯೀಸ್ ಕೈಯಲ್ಲಿ ಮಾಡಿಸಬಹುದಾದಂಥ ಕೆಲಸಗಳು ಅಲ್ಲಿವೆ. ಅದನ್ನು ಸರಿಯಾಗಿ ಮಾಡಿಸುತ್ತಿಲ್ಲ. ಇದು ಬಹಳ ಅಗೌರವ ತರತಕ್ಕಂಥಾದ್ದು. ಮಾನ್ಯ ಮಂತ್ರಿಗಳು ಹೇಳಿದಂತೆ ಈಗ ದುಡ್ಡು ಕಡಿಮೆ ಅಲೋಕೇಷನ್ ಆಗಿರಬಹುದು. ಆದರೆ ಈಗ ನಡೆಯುತ್ತಿದೆ ಎಂದು ಏನು ಹೇಳುತ್ತಿದ್ದಾರೆ, ಅದು ನಡೆಯುತ್ತಿಲ್ಲ ಎಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.— ಸನ್ಮಾನ್ಯ ಸದಸ್ಯರ ಜೊತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ನಾನೇ ಕರೆದುಕೊಂಡು ಹೋಗಿ, ಅಸೆಂಬ್ಲಿ ಮುಗಿದ ಮರುದಿನವೇ ಈ ಎಲ್ಲಾ ಕ್ವಾರ್ಟರ್ಸ್ ಪರಿಶೀಲನೆ ಮಾಡಿ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನೂ ಕೈಗೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.